**ಡಿ.ಡಬ್ಲ್ಯೂ-1**

**ದಿಃ 28.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ VGK ವಕೀಲರಿಂದ**:

OS No.619/2009 ರ ದಾವಾ ಸ್ವತ್ತುಗಳು ಕಮರ್ಷಿಯಲ್ ಪ್ರಾಪರ್ಟಿ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತುಗಳಲ್ಲಿ ಅಂಗಡಿಗಳು ಇವೆ ಎಂದರೆ ಸರಿ. OS No.571/2016 ರ ದಾವಾ ಸ್ವತ್ತಿನಲ್ಲು ಸಹ ಅಂಗಡಿಗಳು ಇವೆ ಎಂದರೆ ಸರಿ. ಈ ದಾವೆಯಲ್ಲಿ ದಾವಾ ಸ್ವತ್ತು ಸಿಟಿಎಸ 944 ಮತ್ತು ಅದರ ಅಳತೆ 65.22 Square mtrs ಇರುತ್ತದೆ ಎಂದರೆ ನೆನಪಿಲ್ಲ.

ದಾವಾ ಆಸ್ತಿಗಳು ಮತ್ತು ಅಂಗಡಿಗಳು ವಾದಿಯ ಕಬ್ಜೆಯಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳಲ್ಲಿ ವಾದಿಯವರು ಅಕ್ಕಿ, ಬೇಳೆ ಮತ್ತು ಇನ್ನಿತರ ಪದಾರ್ಥಗಳನ್ನು ಮಾರಾಟ ಮಾಡುವ ಅಂಗಡಿ ಇಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಅಂಗಡಿಯ ಹೆಸರು ಪ್ರಭಾಕರ ಶಂಕರ ಕಲಘಟಗಿ, ಜನರಲ್ ಮರ್ಚಂಟ್ಸ್ ಆಗಿರುತ್ತದೆ ಎಂದರೆ ನೆನಪಿಲ್ಲ. ಸದರಿ ಪ್ರಭಾಕರ ಶಂಕರ ಕಲಘಟಗಿ, ಜನರಲ್ ಮರ್ಚಂಟ್ಸ್ ಇದು ಸುಮಾರು ವರ್ಷಗಳಿಂದ ದಾವಾ ಆಸ್ತಿಯಲ್ಲಿ ಅಂಗಡಿ ಮಳಿಗೆಗಳನ್ನು ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ವಿದ್ಯುತಚ್ಛಕ್ತಿ ಬಿಲ್ ಮತ್ತು ಕರ ಪಾವತಿಯನ್ನು ವಾದಿಯರೇ ತುಂಬುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಹೆಸರು ದಾವಾ ಆಸ್ತಿಗಳ ಸಿಟಿ ಸರ್ವೆ ಉತಾರೆಯಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. 1966 ರಲ್ಲಿ ದಾವಾ ಆಸ್ತಿಗಳಲ್ಲಿ ವಾದಿಯ ತಂದೆಯ ಹೆಸರು ಸಿಟಿ ಸರ್ವೆ ಉತಾರೆಯಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ. ಸಿಟಿ ಸರ್ವೆ ಉತಾರೆಯಲ್ಲಿ ದಾವಾ ಆಸ್ತಿಯು ವಾದಿಯ ಹೆಸರಿಗೆ ನೊಂದಾಯಿತ ದಾಖಲೆಯ ಮುಖಾಂತರ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನೊಂದಾಯಿತ

ದಾಖಲೆಗಳನ್ನು ವಾದಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

OS 619/2009 ದಾವಾ ಸ್ವತ್ತು ಮತ್ತು ಇತರ ಸ್ವತ್ತುಗಳ ಕಬ್ಜೆಯನ್ನು ಕೋರಿ ದಾವೆಗಳನ್ನು ಹೂಡಿದ್ದೇನು ಎಂದರೆ ಸರಿ, ಆದರೆ ಸರಿಯಾಗಿ ನೆನಪಿಲ್ಲ. OS No.619/2009 ರಲ್ಲಿ ಸರ್ವೆ ನಂ.946, 946/1, 944, 946/6, 945, 946/2, 947/1/ಬಿ2, ಸಿಟಿಎಸ 947/2ಎ, 947/2ಬಿ ರ ಆಸ್ತಿಗಳ ಕಬ್ಜೆಯನ್ನು ಕೋರಿ ಹೂಡಿದ್ದೆ ಎಂದರೆ ಸರಿ. ಈ ಮೇಲೆ ಹೇಳಿದ ಆಸ್ತಿಗಳು ವಾದಿಯ ಮತ್ತು ಇನ್ನು ಇದಕ್ಕೆ ಹೊಂದಿಕೊಂಡಿರುವ ಕೇಸುಗಳ ವಾದಿಗಳ ಕಬ್ಜೆಯಲ್ಲಿ ಇದೆ ಎಂದರೆ ಸರಿಯಲ್ಲ. ಇದೆಲ್ಲಾ ಆಸ್ತಿಗಳ ಮಾಲೀಕರ ಹೆಸರು ಸಿಟಿಎಸ ಉತಾರೆಯಲ್ಲಿ ನಮೂದಾಗಿದೆ ಎಂದರೆ ಖಾದಿರಪಾಶಾ ಇನಾಮದಾರ ಮತ್ತು ಶಾದಿರಪಾಶಾ ಇನಾಮದಾರ, ಕೊನಿನಪಾಶಾ ಇನಾಮದಾರ ಇವರ ಹೆಸರಿನಲ್ಲಿ ಇದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

ವಾದಿಯ ಮತ್ತು ಇತರರ ನೊಂದಾಯಿತ ದಾಖಲೆಗಳನ್ನು ಹಾಗೂ ಸಿಟಿಎಸ ಎಂಟ್ರಿಗಳನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

OS No.619/2009 ರಲ್ಲಿ ಸಿಟಿ ಸರ್ವೆ ಎಂಟ್ರಿ ಮೇಲೆ ಆಸ್ತಿಗಳನ್ನು ಕೇಳಿದ್ದೆ ಎಂದರೆ ಗೊತ್ತಿಲ್ಲ. ಸಿಟಿ ಸರ್ವೆ ಎಂಟ್ರಿಯಲ್ಲಿ ನನ್ನ ಹೆಸರು ಇದೆ ಎಂದು ನಾನು ಕಬ್ಜೆ ಕೇಳಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಇತರ ಆಸ್ತಿಗಳು ವಾದಿಗಳ ಕಬ್ಜೆಯಲ್ಲಿ ಇದೆ ಎಂದು ತಿಳಿದಿದ್ದರೂ ಸಹ ನಾನು 1ನೇ ಪ್ರತಿವಾದಿಯಾದ ಕಾರ್ಪರೇಷನ ಮೇಲೆ ಮಾತ್ರ ಕಬ್ಜೆಗಾಗಿ ದಾವೆ ಹೂಡಿದ್ದೇನು ಎಂದರೆ ಸರಿಯಲ್ಲ. 2009 ರಲ್ಲಿ ದಾವಾ ಸ್ವತ್ತು ಮತ್ತು ಇತರ ಆಸ್ತಿಗಳಲ್ಲಿ ಕಾರ್ಪರೇಷನ ಕಬ್ಜೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ನಾವು ಕಾರ್ಪರೇಷನಗೆ ನೀಡಿದ್ದೇವು ಎಂದು ಸಾಕ್ಷಿ ಸ್ವತಃ

ನುಡಿಯುತ್ತಾರೆ. OS No.619/2009 ರಲ್ಲಿ ವಾದಿ ಮತ್ತು ಇತರರನ್ನು ಪಾರ್ಟಿ ಮಾಡಲು ಅಡಚಣೆ ಇರಲಿಲ್ಲ ಎಂದರೆ ಅವಶ್ಯಕತೆ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ದಾವೆಯನ್ನು ಕಬ್ಜೆಗಾಗಿ ಸಲ್ಲಿಸಿದ್ದರಿಂದ ವಾದಿ ಅವಶ್ಯಕ ಪಾರ್ಟಿ ಆಗಿದ್ದರು ಎಂದರೆ ಸರಿಯಲ್ಲ.

ನಿಪಿಃ 8, 8(ಎ) ರಿಂದ 8(ಸಿ) ದಾವಾ ಸ್ವತ್ತಿನ ಫೋಟೋಗಳು ಮತ್ತು ಸಿಡಿ ಎಂದರೆ ಇರಬಹುದು.

OS No.619/2009 ಸಲ್ಲಿಸುವ ವೇಳೆಗೆ ವಾದಿಯು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದಾನೆ ಎಂದು ಗೊತ್ತಿತ್ತು ಎಂದರೆ ಸರಿಯಲ್ಲ. ಆದರೂ ಸಹ ವಾದಿಯನ್ನು ಸದರಿ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ವಕೀಲರಿಗೆ ತಕರಾರು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ದಾವಾ ಸ್ವತ್ತಿಗೆ ವಿದ್ಯುಚ್ಚಕ್ತಿ ಮತ್ತು ಆಸ್ತಿ ತೆರಿಗೆ ವಾದಿ ಪಾವತಿ ಮಾಡುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನೇ ವಾಸ ಮಾಡುತ್ತಿದ್ದೇನೆ. ದಾವಾ ಸ್ವತ್ತು ಅಂಗಡಿಯಾಗಿರುತ್ತದೆ. OS No.619/2009 ರ ಪ್ರಕರಣವನ್ನು ನಾನು ಹಾಕಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿದ್ದ ಆಸ್ತಿ ಹಾಗೂ ಈ ಪ್ರಕರಣದ ಆಸ್ತಿ ಎರಡು ಒಂದೇ ಎಂದರೆ ಸರಿ. OS No.619/2009 ನ್ನು ದಾವಾ ಸ್ವತ್ತಿನ ಸ್ವಾಧೀನ ಕೋರಿ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ಮಹಾನಗರ ಪಾಲಿಕೆ ವಿರುದ್ಧ ಹಾಕಿದ್ದೆ ಎಂದರೆ ಸರಿ. ನಾನು ಕೇಸು ಹಾಕಿದಾಗ ಮಹಾನಗರ ಪಾಲಿಕೆ ಸ್ವಾಧೀನದಲ್ಲಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆ ಹಾಕಿದಾಗ ವಾದಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ವಾದಿ ಸ್ವಾಧೀನದಲ್ಲಿದ್ದರು ಸಹ ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ.

**ಡಿ.ಡಬ್ಲ್ಯೂ-1**

OS No.619/2009 ನ್ನು ಡಿಕ್ರಿ ಆದನಂತರ, ನಾನು ಜಾರಿ ಅರ್ಜಿ ಸಂಖ್ಯೆ 158/2017 ಹಾಕಿದ್ದೆ ಎಂದರೆ ಸರಿ. ಸದರಿ ಜಾರಿ ಅರ್ಜಿಯನ್ನು ದಿನಾಂಕ 14.11.2024 ನಾನು ಮುಂದುವರಿಸರಲಿಲ್ಲ ಎಂದು ವಾಪಸು ಪಡೆದುಕೊಂಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಮಲು ಜಾರಿ ಅರ್ಜಿಯಲ್ಲಿ ನಾನು ವಾದಿಯನ್ನು ಪಕ್ಷಗಾರರನಾನಗಿ ಮಾಡಿಲ್ಲ ಎಂದರೆ ಸರಿ. ವಾದಿ ಸ್ವಾಧೀನದಲ್ಲಿದ್ದರು ಸಹ ಉದ್ದೇಶಪೂರ್ವಕವಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**
**1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**